ಬಸ್ ಮಾರ್ಗಗಳ ರಾಷ್ಟ್ರೀಕರಣದ ಬಗ್ಗೆ

ಲಾಖಿರೆ. ಶ್ರೀ ಬಿ. ಎ. ಉಮ್ಮಾರಬ್ಬ (ವಿಟ್ಲ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇದುವರೆಗೆ ಎಷ್ಟು ಜಿಲ್ಲೆಗಳಲ್ಲಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಿಸಲಾಗಿದೆ ?

ಆ) ಉಳಿದ ಜಿಲ್ಲೆಗಳ ರಾಷ್ಟ್ರೀಕರಣ ಯಾವ ಅವಧಿಯಲ್ಲಿ ಮಾಡಲಾಗುತ್ತಿದೆ ?

ಇ) ರಾಜ್ಯ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಐದು ಡಿವಿಜನ್‌ಗಳಾಗಿ ವಿಭಾಗಿಸುವ ಯೋಜನೆ ಯಾವ ಹಂತದಲ್ಲಿದೆ ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಇ) ಇದುವರೆಗೆ ಒಂಬತ್ತು ಜಿಲ್ಲೆಗಳಲ್ಲಿ ಬಸ್ ಮಾರ್ಗಗಳನ್ನು ಪೂರ್ಣ ರಾಷ್ಟ್ರೀಕರಣ ಮಾಡಲಾಗಿದೆ. ಹಾಗೂ ೫ ಜಿಲ್ಲೆಗಳಲ್ಲಿ ಬಸ್ ಮಾರ್ಗಗಳನ್ನು ಭಾಗಶಃ ರಾಷ್ಟ್ರೀಕರಣ ಮಾಡಲಾಗಿದೆ.

ಆ) ಉಳಿದ ಜಿಲ್ಲೆಗಳಲ್ಲಿ ರಾಷ್ಟ್ರೀಕರಣವನ್ನು ಹಂತ ಹಂತವಾಗಿ ಮಾಡಲು ಯೋಜಿಸಲಾಗಿದೆ. ಸದ್ಯ ಈಗಾಗಲೇ ಮೈಸೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳ ರಾಷ್ಟ್ರೀಕರಣದ ಕರಡು ಯೋಜನೆ ಪ್ರಕಟಿತವಾಗಿದೆ.

ಇ) ಇದರ ಬಗ್ಗೆ ರಚಿಸಿದ ಪರಿಣಿತರ ಸಮಿತಿಯು ಈಗಾಗಲೇ ಸರ್ಕಾರಕ್ಕೆ ವರದಿ ಮಾಡಿದೆ. ವರದಿ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಎ. ಉಮ್ಮಾರಬ್ಬ.—ಮಾನ್ಯ ಅಧ್ಯಕ್ಷರೇ, ಮಾನ್ಯ ರತ್ನಾಕರ್‌ರವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ಒಂದು ತಾಳಿ ಕಟ್ಟಿಸಿಬಿಡಿ. ಇಲ್ಲವಿದ್ದರೆ ಅವರು ಗಲಾಟೆ ನಿಲ್ಲಿಸುವುದಿಲ್ಲ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಅವರು ಸುಮ್ಮನೆ ಇರುವುದಿಲ್ಲ.

ಅಧ್ಯಕ್ಷರು.—ಮಾನ್ಯ ನಾಯಕರ ಅಧ್ಯಕ್ಷತೆಯಲ್ಲಿ ಅವರಿಗೂ ಮತ್ತು ಮಾನ್ಯ ಲಕ್ಷ್ಮೀಸಾಗರ್ ರವರಿಗೆ ಇಬ್ಬರಿಗೂ ಕೊಡುವ.

ಶ್ರೀ ಬಿ. ಎ. ಉಮ್ಮಾರಬ್ಬ.—ತಾಳಿ ಭಾಗ್ಯ ಯೋಜನೆ ಹಿಂದಕ್ಕೆ ತೆಗೆದುಕೊಂಡಿದ್ದರೂ ಇವರ ಕೇಸ್‌ನಲ್ಲಿ ಮಾತ್ರ ಸ್ವಲ್ಪ ಎಕ್ಸೆಂಪ್‌ಷನ್ ಮಾಡಿ ಕೊಡಿ.

ಶ್ರೀ ಗೋಪಾಲ ಮುಕುಂದ ಕಾನಜೆ.—ಉಳಿದಿದ್ದು ಇದ್ದರೂ ಸಾಕು ಅದನ್ನೇ ಕೊಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಒಂದು ಗಂಟೆಯಲ್ಲಿ ಬೇಕಾದರೆ ನಾನು ಮಾಡಿಸಿಕೊಡುತ್ತೇನೆ. ಅವರಂ ರೆಡಿ ಇದ್ದಾರೆ.

ಶ್ರೀ ಬಿ. ಎ. ಉಮ್ಮಾರಬ್ಬ.—ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಯಾವ ಯಾವ ಜಿಲ್ಲೆಯಲ್ಲಿ ಭಾಗಶಃ ಮಾಡಲಾಗಿದೆ, ಇನ್ನು ಯಾವ ಯಾವ ಜಿಲ್ಲೆಯಲ್ಲಿ ರಾಷ್ಟ್ರೀಕರಣ ಮಾಡುವುದು ಬಾಕಿ ಇದೆ. ಬಾಕಿ ಉಳಿಯಲು ಕಾರಣವೇನು ?

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಯಾವ ಯಾವ ಜಿಲ್ಲೆಯಲ್ಲಿ ಭಾಗಶಃ ರಾಷ್ಟ್ರೀಕರಣ ಮಾಡಿದೆ ಎನ್ನುತಕ್ಕಂತದ್ದನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಭಾಗಶಃ ರಾಷ್ಟ್ರೀಕರಣ ಮಾಡಿರತಕ್ಕ ಜಿಲ್ಲೆಗಳು ಎಂದರೆ, ಕೋಲಾರ, ಮೈಸೂರು, ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಮಂಗಳೂರು. ಈ ಜಿಲ್ಲೆಗಳಲ್ಲಿ ಭಾಗಶಃ ರಾಷ್ಟ್ರೀಕರಣ ಮಾಡಲಾಗಿದೆ. ಮಾನ್ಯ ಸದಸ್ಯರು ಉಳಿದ ಜಿಲ್ಲೆಗಳಲ್ಲಿ ರಾಷ್ಟ್ರೀಕರಣವನ್ನು ಏಕೆ ಮಾಡಿಲ್ಲವೆಂದು ಕೇಳಿದ್ದಾರೆ. ಬಿಲ್ಲೆಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಇರುತ್ತವೆಯೋ ಅಲ್ಲಿ ಮೊದಲು ರಾಷ್ಟ್ರೀಕರಣ ಮಾಡುವುದು ಉಳಿದ ಭಾಗಗಳಲ್ಲಿ ಹಂತ ಹಂತವಾಗಿ ರಾಷ್ಟ್ರೀಕರಣ ಮಾಡುವುದು ಕಾರ್ಯಕ್ರಮವಾಗಿದೆ.

ಶ್ರೀ ಬಿ. ಎ. ಉಮ್ಮಾರಬ್ಬ.—ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಗಳು ಎಲ್ಲಿ ಇರುತ್ತವೆಯೋ ಅಲ್ಲಿ ರಾಷ್ಟ್ರೀಕರಣವನ್ನು ಪ್ರಾರಂಭಮಾಡುತ್ತದೆಂದು ಮಾನ್ಯ ಸಚಿವರು ಹೇಳಿದ್ದಾರೆ ಗದಗ-ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಇಲ್ಲವೇ ? ಮಂಗಳೂರಿನಿಂದ ಉಡುಪಿಗೆ ಹೆ ಕ್ಷಿಣವಾ

ರಸ್ತೆ ಆಗಬಹುದು, ಕುಂದಾಪುರಕ್ಕೆ ಹೋಗುವ ರಸ್ತೆ ಆಗಬಹುದು, ಬೈಂದೂರಿಗೆ ಹೋಗುವ ರಸ್ತೆ ಆಗಬಹುದು. ಈ ರಸ್ತೆಗಳು ಹೆದ್ದಾರಿಗಳಲ್ಲವೇ ? ಈ ಭಾಗಗಳನ್ನು ರಾಷ್ಟ್ರೀಕರಣ ನೀತಿಗೆ ಏತಕ್ಕೆ ಅಳವಡಿಸಲಿಲ್ಲ ? ಇವರು ಹೇಳಿದಂತೆ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಇಲ್ಲ ಅದಕ್ಕಾಗಿ ಆ ಭಾಗಗಳಲ್ಲಿ ರಾಷ್ಟ್ರೀಕರಣವನ್ನು ಮಾಡಲಾಗಿಲ್ಲ ಎಂದು ಹೇಳಿದ ಹಾಗೆ ಆಯಿತು ಆ ಕಡೆ ರಾಷ್ಟ್ರೀಕರಣ ಮಾಡುವುದಕ್ಕೆ ನಿಮಗಿರುವ ತೊಂದರೆ ಏನು ? What is the problem of the Government to take it uy very seriousiy ? ಗುಣಕ್ಕೆ ಮಂತ್ರಿಗಳು ಇಲ್ಲ. ಮಾನ್ಯ ಸದ್ಧಾರಮಯ್ಯನವರು ಹಿಂದಿನ ಸಾರಿಗೆ ಸಚಿವರಾಗಿದ್ದಾಗ ಕೆಲವು ಪೂರಕವಾದಂಥ ಯೋಜನೆಗಳನ್ನು ಮಾಡಿದ್ದರು ಮತ್ತು ಸಾರಿಗೆ ಸಂಸ್ಥೆಯಲ್ಲಿ ಕೆಲವಾರು ಸುಧಾರಣೆಗಳನ್ನು ಬಹಳ ಚೆನ್ನಾಗಿ ತಂದಿದ್ದರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮಾನ್ಯ ಸಿದ್ಧಾರಮಯ್ಯನವರೇ ನಿಷ್ಪಬಿಂದ ಕೆಲಸ ಮಾಡುವ ಶ್ರೀ ಸಿದ್ಧರಾಮಯ್ಯನವರು ಈ ರೀತಿ ಹಾರಿಕೆ ಉತ್ತರ ಕೊಡಬಾರದು.

ಅಧ್ಯಕ್ಷರು.— ನೀವು ಭಾಷಣ ಮಾಡುತ್ತಿದ್ದೀರೊ ಅಥವಾ ಪ್ರಶ್ನೆ ಕೇಳುತ್ತಿದ್ದೀರೋ ?

ಶ್ರೀ ಬಿ. ಎ. ಉಮರಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳಿದ್ದೂ ಆ ಭಾಗದಲ್ಲಿ ರಾಷ್ಟ್ರೀಕರಣವನ್ನು ಏಕೆ ಮಾಡಲಿಲ್ಲವೆಂಬುದನ್ನು ಕೇಳಬೇಕು.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅದ್ಯಕ್ಷರೇ, ನನ್ನ ಉತ್ತರದಲ್ಲಿ ಭಾಗಶ: ಯಾವ ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಲಾಗಿದೆ ಎಂಬುದನ್ನು ತಿಳಿಸಿದ್ದೇನೆ. ಬೇರೆ ಜಿಲ್ಲೆಗಳಲ್ಲಿ ರಾಷ್ಟ್ರೀಕರಣ ಮಾಡಬಾರದೆಂಬುದು ನಮ್ಮ ಉದ್ದೇಶವಲ್ಲ ರಾಜ್ಯದ ಎಲ್ಲಾ ಭಾಗಗಳಲ್ಲೂ ರಾಷ್ಟ್ರೀಕರಣ ಮಾಡಬೇಕೆನ್ನುವುದೇ ಸರ್ಕಾರ ನೀತಿಯಾಗಿದೆ. ರಾಷ್ಟ್ರೀಕರಣವನ್ನು ಎಲ್ಲಾ ಕಡೆ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೧೯೭೫ನೇ ಇಸವಿಯಲ್ಲಿ ಸ್ಥಾಪನೆಯಾಯಿತು. ಅಪಕ್ಷಿತ್ತಿನಿಂದಲೂ ಕೂಡ ಹಂತ ಹಂತವಾಗಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿಕೊಂಡು ಬರುತ್ತಿದ್ದೇವೆ ೧೯೮೫ನೇ ಇಸವಿಯಲ್ಲಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದೇವೆ. ಕಳೆದ ವರ್ಷ ರಾಯಚೂರು ಜಿಲ್ಲೆಯಲ್ಲಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಲಾಯಿತು. ಈ ವರ್ಷ ೫ ಜಿಲ್ಲೆಗಳನ್ನು ಅಂದರೆ, ಮೈಸೂರು, ಕೋಲಾರ ಮತ್ತು ಚಿತ್ರದುರ್ಗಗಳಲ್ಲಿ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವ ಉದ್ದೇಶ ಇದೆ. ಒಂದೇ ಸಾರಿ ಎಲ್ಲಾ ಜಿಲ್ಲೆಗಳನ್ನೂ ರಾಷ್ಟ್ರೀಕರಣ ಮಾಡುವುದಕ್ಕಾಗುವುದಿಲ್ಲ. ಸಂಸ್ಥೆಯಲ್ಲಿ ಸಿಗತಕ್ಕಂಥ ಸಂಪನ್ಮೂಲಗಳನ್ನು ಮತ್ತು ಜನತೆಯ ಬೇಡಿಕೆಗಳನ್ನು ನೋಡಿಕೊಂಡು ಹಂತ ಹಂತವಾಗಿ ರಾಷ್ಟ್ರೀಕರಣವನ್ನು ಮಾಡಲಾಗುತ್ತದೆ. ಒಂದೇ ಸಾರಿ ೨೦ ಜಿಲ್ಲೆಗಳಲ್ಲೂ ರಾಷ್ಟ್ರೀಕರಣ ಮಾಡುವುದು ಅಸಾಧ್ಯವಾದ ವಿಚಾರ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಇವೆ ಅಲ್ಲಿ ರಾಷ್ಟ್ರೀಕರಣ ಮಾಡಬಾರದೆಂದು ನಮ್ಮ ಉದ್ದೇಶವಲ್ಲ. ಮುಂದಿನ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಕಾರ್ಯ ಕ್ರಮವನ್ನು ರೂಪಿಸುತ್ತೇವೆ ಎಲ್ಲಾ ಜಿಲ್ಲೆಗಳಲ್ಲೂ ಬಸ್‌ಗಳನ್ನು ಓಡಿಸಕ್ಕೆ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಮುಂದಿನ ಹಂತದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ರಾಷ್ಟ್ರೀಕರಣ ವ್ಯಾಪ್ತಿಯಲ್ಲಿ ಬರುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

೧೦–೦೦ ಪಿ.ಎಂ.

ಅಧ್ಯಕ್ಷರು.—ಮಾನ್ಯ ಉಮರಬ್ಬರವರೇ, ತಮಗೆ ಮಾನ್ಯ ಸಚಿವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಪುನಃ ಪುನಃ ಕೇಳುತ್ತಿದ್ದೀರಿ. ನಿಮಗೆ ಸಮಯ ಪ್ರಶ್ನೆ ಇಲ್ಲವೆ ?

ಶ್ರೀ ಬಿ. ಎ. ಉಮರಬ್ಬ.—ರಾಜ್ಯ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಐದು ಡಿವಿಜನ್‌ಗಳಾಗಿ ವಿಭಾಗಿಸುವ ಯೋಜನೆ ಯಾವ ಹಂತದಲ್ಲಿದೆ ಎಂದು ಕೇಳಿದ್ದಕ್ಕೆ ಇದರ ಬಗ್ಗೆ ರಚಿಸಿದ ಪುರಿನಿತರ ಸಮಿತಿಯು ಈಗಾಗಲೇ ಸರ್ಕಾರಕ್ಕೆ ವರದಿ ಮಾಡಿದೆ. ಸಾಗೂ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಯಾವಾಗಲಿಂದ ಈ ವರದಿಯು ಸರ್ಕಾರಕ್ಕೆ ಬಂದು ಎಷ್ಟು ಸಮಯವಾಯಿತು ? ವರದಿಯ ಮೇಲೆ ಪರಿಶೀಲನೆ ಕಾರ್ಯವನ್ನು ತ್ವರಿತಗಿಸಿ ಯಾವಾಗ ಡಿವಿಜನ್‌ಗಳನ್ನು ಮಾಡುತ್ತೀರಿ ? ಮತ್ತು ಇದರಿಂದಾಗಿ ಸಾರಿಗೆ ಸಂಸ್ಥೆಯಲ್ಲಿ ಯಾವ ರೀತಿಯ ಲಾಭ ಆಗುತ್ತದೆ ಎಂಬ ಬಗ್ಗೆ ತಿಳಿಸುತ್ತೀರಾ ?

ಶ್ರೀ ಎಸ್. ಸಿದ್ದರಾಮಯ್ಯ.—ಈ ಡಿವಿಜನ್‌ಗಳಾಗಿ ವಿಭಾಗಿಸುವ ಯೋಜನೆ ಬಗ್ಗೆ ಪರಿಣತರ ಸಮಿತಿಯನ್ನು ರಚನೆ ಮಾಡಿದ್ದು ನಿಜ. ಅವರು ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಕೊಟ್ಟಿದ್ದಾರೆ ಎಂದು ಉತ್ತರದಲ್ಲಿಯೂ ತಿಳಿಸಿದ್ದೇನೆ. ಆ ಸಮಿತಿಯು ೧೧-೭-೧೯೮೮ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಆ ವರದಿಯಲ್ಲಿ ರಾಜ್ಯ ರಸ್ತೆ ಸಾರಿಗೆ ವ್ಯವಸ್ಥೆಯನ್ನು ಳಿ-ಖಿ ಸ್ವಾಯತ್ತ ಸಂಸ್ಥೆಗಳನ್ನಾಗಿ ಮಾಡಬೇಕೆಂದು ಶಿಫಾರಸ್ಸು ಇದೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಕೂಡ ಸಾರಿಗೆ ವ್ಯವಸ್ಥೆಗೆ ಒಂದು ಸಂಸ್ಥೆಯು ಇದೆ. ಅಲ್ಲಿ ಅವರು ಯಾವ ರೀತಿಯಲ್ಲಿ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದು ನೋಡಬೇಕಾಗುತ್ತದೆ. ತಮಿಳುನಾಡಿನಲ್ಲಿಯೂ ಕೂಡ ವಿಭಾಗ ಸಂಸ್ಥೆಗಳು ಇವೆ. ಅಲ್ಲಿನ ವ್ಯವಸ್ಥೆಯನ್ನು ಪರಿಶೀಲನೆ ಮಾಡಿ, ಅದರಿಂದ ಎಷ್ಟು ಲಾಭ-ನಷ್ಟ ಆಗುತ್ತಿದೆ ಮತ್ತು ಸಾರ್ವಜನಿಕರಿಗೆ ಇಂತಹ ವ್ಯವಸ್ಥೆಯಿಂದಾಗಿ ಎಷ್ಟರಮಟ್ಟಿಗೆ ಅನುಕೂಲ ಆಗುತ್ತಿದೆ ಎಂಬುದನ್ನು ನೋಡಬೇಕಲ್ಲದೆ, ಸಂಸ್ಥೆಯಲ್ಲಿ ದಕ್ಷತೆ ಎಷ್ಟರಮಟ್ಟಿಗೆ ಹೆಚ್ಚಿಗೆ ಆಗುತ್ತಿದೆ ಎಂಬ ಎಲ್ಲಾ ವಿಚಾರಗಳನ್ನು ಕೂಲಂಕಷವಾಗಿ ವಿಚಾರ ಮಾಡಿ ಆ ಮೇಲೆ ಈ ಬಗ್ಗೆ ನಿರ್ಣಯವನ್ನು ಮಾಡಬೇಕಾಗುತ್ತದೆ

ಶ್ರೀ ಬಿ. ಎ. ಉಮರಬ್ಬ.—ಅಧ್ಯಕ್ಷರೇ, ನಾನೊಂದು ಸಲಹೆಯನ್ನು ಮಾತ್ರ ಕೊಡುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಮಾನ್ಯ ಉಮರಬ್ಬನವರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ನನ್ನ ಪ್ರಶ್ನೆ ಇವೆ ಮತ್ತು ಹಲವಾರು ಪ್ರಶ್ನೆಗಳು ಇನ್ನೂ ಬಾಕಿ ಇವೆ. ನನಗೆ ಅವಕಾಶ ಕೊಡಿ.

ಅಧ್ಯಕ್ಷರು. ಯಾರು ಪ್ರಶ್ನೆ ಹಾಕಿದ್ದಾರೋ ಅವರು ಮಾತ್ರ ಪ್ರಶ್ನೆ ಕೇಳಬೇಕು. ಈಗಾಗಲೇ ಪ್ರಶ್ನೋತ್ತರ ವೇಳೆ ಮುಗಿದಿದೆ, ಆದರೂ ತಪ್ಪಿಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಮುಂದಿನ ಪ್ರಶ್ನೆ ಮಾನ್ಯ ಗೋಪಾಲ ಮುಕುಂದ ಕಾನಡೆಯವರು ಕೇಳಿ.....

ಕರ್ನಾಟಕ ರೇಷ್ಮೆ ಮಾರಾಟ ಮಂಡಲಿಯ ಉತ್ಪಾದನ ಬಗ್ಗೆ

೨೯೫೩. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ರೇಷ್ಮೆ ಮತ್ತು ಪಶು ಸಂಗೋಪನ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯು ಲಾಭದಲ್ಲಿದೆಯೇ ಆರ್ಥಿಕ ನಷ್ಟದಲ್ಲಿ ನಡೆಯುತ್ತಿದೆಯೇ ?

ಆ) ಈ ರೇಷ್ಮೆ ಮಂಡಳಿಯು ರೈತರಿಗೆ ರೇಷ್ಮೆ ಬಗ್ಗೆ ಸಾಲ ಕೊಡುತ್ತಿರುವುದು ನಿಜವೇ ?

ಇ) ಸದರಿ ಸಾಲ ಪಡೆದುಕೊಂಡವರಿಂದ ರೇಷ್ಮೆ ಮಂಡಳಿಗೆ ಬಾಕಿ ಬರಬೇಕಾದ ಹಣದ ಮೊತ್ತವೆಷ್ಟು ?

ಈ) ಹಾಗಿದ್ದಲ್ಲಿ, ಇದುವರೆವಿಗೂ ಈ ಬಾಕಿ ವಸೂಲು ಮಾಡದೇ ಇರಲು ಕಾರಣವೇನು ಹಾಗೂ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಉ) ಈ ರೇಷ್ಮೆ ಮಂಡಳಿಯಲ್ಲಿ ಎಷ್ಟು ಜನ ನೌಕರರಿದ್ದಾರೆ ?

ಊ) ಈ ನೌಕರರಲ್ಲಿ ಎಷ್ಟು ಮಂದಿ ಹರಿಜನ ಅಧಿಕಾರಿಗಳಿದ್ದಾರೆ ?

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನ ಸಚಿವರು).—

ಅ) ಲಾಭದಲ್ಲಿ ನಡೆಯುತ್ತಿದೆ.

ಆ) ರೈತರಿಗೆ ಸಾಲ ನೀಡುತ್ತಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಈ ಮಂಡಳಿಯಲ್ಲಿ ೧೪೮ ಮಂದಿ ಕ್ರಮಬದ್ಧ ಸೇವೆಯಲ್ಲಿಯೂ, ೧೦ ಮಂದಿ ದಿನಗೂಲಿ ೧೯ ಮಂದಿ ನಿಗದಿತ ವೇತನದಲ್ಲಿಯೂ ಮತ್ತು ೬ ಮಂದಿ ನಿಯೋಜನೆ ಮೇರೆಗೂ ಇರುತ್ತಾರೆ.